ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

## ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 24.05.2012 ರಂದು ಮಧ್ಯಾಹ್ನ 4.00ಗಂಟೆಗೆ ಕೊಠಡಿ ಸಂಖ್ಯೆ: 406, ವಿಕಾಸಸೌಧ, ಬೆಂಗಳೂರು ಇಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಪರಿಷತ್ ಸಭೆಯ ನಡವಳಿಗಳು:

PSME
4392

**ಅಧ್ಯಕ್ಷತೆ:**

1) ಶ್ರೀ ಎಸ್.ಎ. ರಾಮದಾಸ್
ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು
ಹಾಗೂ ಅಧ್ಯಕ್ಷರು, ಮಿಮ್ಸ್ ಆಡಳಿತ ಪರಿಷತ್,
ಕರ್ನಾಟಕ ಸರ್ಕಾರ, ಬೆಂಗಳೂರು.

**ಹಾಜರಿದ್ದ ಸದಸ್ಯರುಗಳು**

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು — ಉಪಾಧ್ಯಕ್ಷರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ),
ವಿಧಾನಸೌಧ, ಬೆಂಗಳೂರು.

3) ಸರ್ಕಾರದ ಅಪರ ಕಾರ್ಯದರ್ಶಿಗಳು — ಸದಸ್ಯರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ),
ವಿಧಾನಸೌಧ, ಬೆಂಗಳೂರು

4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು — ಸದಸ್ಯರು
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು.

5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು — ಸದಸ್ಯರು
ಯೋಜನಾ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಸಂಸ್ಥೆ
ಮಂಡ್ಯ.
ಸಂಖ್ಯೆ :
ದಿನಾಂಕ : 06/08/2012
ಆಡಳಿತಾಧಿಕಾರಿ ನಿರ್ದೇಶಕರು

6) ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆನಂದರಾವ್ ವೃತ್ತ, ಬೆಂಗಳೂರು. — ಸದಸ್ಯರು

7) ನಿರ್ದೇಶಕರು — ಸದಸ್ಯರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಆನಂದರಾವ್ ವೃತ್ತ,
ಬೆಂಗಳೂರು.

8) ಕಾರ್ಯಪಾಲಕ ಅಭಿಯಂತರರು (ಪ್ರಭಾರ) — ಸದಸ್ಯರು
ಲೋಕೋಪಯೋಗಿ ಇಲಾಖೆ,
ಮಂಡ್ಯ.

9) ಮುಖ್ಯ ಆಡಳಿತಾಧಿಕಾರಿಗಳು — ಸದಸ್ಯರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

10) ಆರ್ಥಿಕ ಸಲಹೆಗಾರರು, — ಸದಸ್ಯರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

11) ನಿರ್ದೇಶಕರು, — ಸದಸ್ಯ ಕಾರ್ಯದರ್ಶಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

ಆಡಳಿತ ಪರಿಷತ್ತಿನ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

<u>ವಿಷಯ ಸಂಖ್ಯೆ</u>: 1

**ದಿನಾಂಕ: 23.12.2011 ರಂದು ಮಿಮ್ಸ್ ಆಡಳಿತ ಮಂಡಳಿ ಸಭೆಯ ನಡವಳಿ ಹಾಗೂ ಅನುಸರಣಾ ವರದಿಯನ್ನು ಅನುಮೋದಿಸುವ ಕುರಿತು.**

**ನಿರ್ಣಯ:** ದಿನಾಂಕ: 23.12.2011 ರ ಮಿಮ್ಸ್ ಆಡಳಿತ ಮಂಡಳಿಯ ಸಭೆಯ ನಡವಳಿಗಳನ್ನು ಈ ಕೆಳಕಂಡ ಬದಲಾವಣೆಗಳೊಂದಿಗೆ ಅನುಮೋದಿಸಲಾಯಿತು.

**ವಿಷಯ:4**

**2012-13 ರ ಸಾಲಿಗೆ ವೈದ್ಯಕೀಯ ಕಾಲೇಜು ಮತ್ತು ಬೋಧಕ ಆಸ್ಪತ್ರೆಗೆ ಆಯವ್ಯಯ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ.**

**ನಿರ್ಣಯ:** ಕಟ್ಟಡ ಕಾಮಗಾರಿಗಳನ್ನು ಮೂರನೇ ಸಂಸ್ಥೆಯಿಂದ ತಾಂತ್ರಿಕ ಪರಿವೀಕ್ಷಣೆ (Third Party Inspection) ಮಾಡಿಸುವ ಕುರಿತಂತೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ಗುಣ ನಿಯಂತ್ರಣ ವಿಭಾಗದಿಂದ ಪರಿವೀಕ್ಷಣೆ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ವಿಷಯ:5**

**ನೇರ ಸಂದರ್ಶನದ ಮುಖಾಂತರ ಹಾಗೂ ನೇರ ನೇಮಕಾತಿಯ ಮೂಲಕ ಮಾಡಿಕೊಂಡಿರುವ ಬೋಧಕ ವೈದ್ಯರುಗಳ ನೇಮಕಾತಿಯನ್ನು ಅಂಗೀಕರಿಸುವ ಬಗ್ಗೆ.**

**ನಿರ್ಣಯ:** ಈ ಕುರಿತಂತೆ ಮಿಮ್ಸ್ ಸಂಸ್ಥೆಯ ನಿರ್ದೇಶಕರು ದಾಖಲಾತಿಗಳನ್ನು ಪ್ರಾಥಮಿಕವಾಗಿ ಪರಿಶೀಲಿಸಿ ತದನಂತರ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ತಾಂತ್ರಿಕ ಸಲಹೆಗಾರರೊಂದಿಗೆ ವಿವಾಧಿತ ದಾಖಲಾತಿಗಳ ಬಗ್ಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ವಿಷಯ: 12**

**ಸಂಸ್ಥೆಯಲ್ಲಿ ಕ್ರೋಢೀಕೃತ ವೇತನದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.**

**ನಿರ್ಣಯ:** ಈ ಕುರಿತಂತೆ ಶಿವಮೊಗ್ಗ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ನೇರ ನೇಮಕಾತಿಗಾಗಿ ಅಳವಡಿಸಿಕೊಂಡಿರುವ ಮಾನದಂಡಗಳನ್ನು ಅಳವಡಿಸಿಕೊಂಡು ನಿಯಮಾನುಸಾರ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ನೇರನೇಮಕಾತಿಯ ಪ್ರಕ್ರಿಯೆಯನ್ನು ಕೈಗೊಳ್ಳಬೇಕೆಂದು ಹಾಗೂ ಅಲ್ಲಿಯವರೆಗೆ ಇವರ ಸೇವೆಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು.

ವಿಷಯ: 14

**ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ P.F.Scheme (ಭವಿಷ್ಯನಿಧಿ) ಸೌಲಭ್ಯವನ್ನು ನೀಡುವ ಬಗ್ಗೆ.**

ನಿರ್ಣಯ: ಈ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಈ ಯೋಜನೆಯನ್ನು ಅಳವಡಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಂಡು ಸಂಸ್ಥೆಗೆ ನಿರ್ದೇಶನ ನೀಡಲು ತೀರ್ಮಾನಿಸಲಾಯಿತು. ಈ ಬಗ್ಗೆ ಸರ್ಕಾರದೊಂದಿಗೆ ವ್ಯವಹರಿಸಲು ಸೂಚಿಸಲಾಯಿತು.

ವಿಷಯ: 16

**In-service ಕೋಟಾದಡಿಯಲ್ಲಿ Super Specialty Course ಗೆ ಆಯ್ಕೆಯಾಗಿರುವ ವೈದ್ಯರುಗಳ ವ್ಯಾಸಂಗ ಶುಲ್ಕ ಹಿಂದಿರುಗಿಸುವ ಬಗ್ಗೆ.**

ನಿರ್ಣಯ: ಸಂಸ್ಥೆಯಿಂದ ಇನ್ನು ಮುಂದೆ In-service ಕೋಟಾದಡಿಯಲ್ಲಿ Super Specialty Course ಗೆ ಆಯ್ಕೆಯಾಗುವ ವೈದ್ಯರುಗಳು ವೇತನರಹಿತ ರಜೆಯ ಮೇಲೆ ಮಾತ್ರ ತೆರಳಲು ಅವಕಾಶ ನೀಡಬೇಕೆಂದು ಸೂಚಿಸಲಾಯಿತು. ಹಾಗೂ ಅವರು ಹೆಚ್ಚಿನ ವ್ಯಾಸಂಗಕ್ಕೆ ತೆರಳುವ ಮುನ್ನ ಯಾವ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದರೋ ಹೆಚ್ಚಿನ ವ್ಯಾಸಂಗದ ನಂತರವೂ ಕೂಡ ಅದೇ ವಿಭಾಗದಲ್ಲಿ ಮುಂದುವರೆಯುತ್ತೇನೆಂಬ ಮುಚ್ಚಳಿಕೆಯನ್ನು ಪಡೆಯಬೇಕೆಂದು ಸೂಚಿಸಲಾಯಿತು.

ವಿಷಯ: 20

**ಮಂಡ್ಯದಲ್ಲಿ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸುವ ಬಗ್ಗೆ.**

ನಿರ್ಣಯ: ಈ ಯೋಜನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲು ತೀರ್ಮಾನಿಸಲಾಯಿತು.

ವಿಷಯ: 22

**ಸೋಲಾರ್ ಲೈಟನ್ನು ಸಂಸ್ಥೆಯ ಕಾಲೇಜು, ಆಸ್ಪತ್ರೆ ಮತ್ತು ವಿದ್ಯಾರ್ಥಿನಿಲಯಗಳಿಗೆ ಅಳವಡಿಸಲು ಅನುಮೋದನೆ ನೀಡುವ ಬಗ್ಗೆ.**

**ನಿರ್ಣಯ:** ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಸಂಸ್ಥೆಯಾದ **"ಸರ್ಕಾರದ ಕರ್ನಾಟಕ ನವೀಕರಿಸಬಹುದಾದ ಇಂದನ ಮೂಲಗಳ ಅಭಿವೃದ್ಧಿ ಸಂಸ್ಥೆಯಿಂದ"** ಕೈಗೊಳ್ಳಲು ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

ವಿಷಯ: 24

1) **ಆರ್ಥಿಕ ಸಲಹೆಗಾರರಿಗೆ ಹೆಚ್ಚುವರಿ ಗೌರವ ಧನ ನೀಡುವ ಬಗ್ಗೆ.**

**ನಿರ್ಣಯ:** ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಆರ್ಥಿಕ ಸಲಹೆಗಾರರು ನಿವೃತ್ತಿ ಹೊಂದಿದ ಅಧಿಕಾರಿಯಾದ್ದರಿಂದ ಧನಾದೇಶಗಳನ್ನು ಮುಖ್ಯ ಆಡಳಿತಾಧಿಕಾರಿಗಳು ಹಾಗೂ ಸಂಸ್ಥೆಯ ನಿರ್ದೇಶಕರು ಜಂಟಿಯಾಗಿ ಸಹಿ ಮಾಡಬೇಕೆಂದು ತೀರ್ಮಾನಿಸಲಾಯಿತು.

3) **ಕನ್ನಡದ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ಹೆಚ್ಚಿಸುವ ಬಗ್ಗೆ.**

**ನಿರ್ಣಯ:** ಈ ವಿಷಯಕ್ಕೆ ಸಂಬಂಧಿಸಿದಂತೆ ಇತರೆ ವಿಷಯಗಳ ಅತಿಥಿ ಉಪನ್ಯಾಸಕರು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅವರಿಗೂ ಕೂಡ ಕನ್ನಡ ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ಸಂಭಾವನೆಯಂತೆ ಒಂದು ತರಗತಿಗೆ ರೂ.500/- ರಂತೆ ಗೌರವಧನವನ್ನು ಪಾವತಿಸಲು ತೀರ್ಮಾನಿಸಲಾಯಿತು.

6) **ಜಿಲ್ಲಾಧಿಕಾರಿಗಳನ್ನೊಳಗೊಂಡಂತೆ ಬೋಧಕೇತರ ಸಿಬ್ಬಂದಿಯನ್ನು ನೇಮಕಾತಿ ಮಾಡಲು ನೇಮಕಾತಿ ಸಮಿತಿಯನ್ನು ರಚಿಸುವ ಕುರಿತು.**

**ನಿರ್ಣಯ:** ಈ ಕುರಿತಂತೆ ಶಿವಮೊಗ್ಗ ವೈದ್ಯಕೀಯ ಶಿಕ್ಷಣ ಸಂಸ್ಥೆಯಲ್ಲಿ ನೇರ ನೇಮಕಾತಿಗಾಗಿ ಅಳವಡಿಸಿಕೊಂಡಿರುವ ಮಾನದಂಡಗಳನ್ನು ಅಳವಡಿಸಿಕೊಂಡು ನಿಯಮಾನುಸಾರ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ನೇರನೇಮಕಾತಿಯ ಪ್ರಕ್ರಿಯೆಯನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

---

**ವಿಷಯ ಸಂಖ್ಯೆ 2:**

**ಸಂಸ್ಥೆಯಲ್ಲಿ ಏಕರೂಪದ ಬೈಲಾಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.**

**ನಿರ್ಣಯ:** ಸರ್ಕಾರದಿಂದ ಹೊಸದಾಗಿ ರೂಪಿಸಿರುವ ಏಕರೂಪದ ಬೈಲಾಗಳನ್ನು ಈಗಾಗಲೇ ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಬೈಲಾದೊಂದಿಗೆ ತುಲನಾತ್ಮಕವಾಗಿ ಹೋಲಿಸಿ ಹಾಗೂ ಸಂಸ್ಥೆಯ ಕಾನೂನು ಸಲಹೆಗಾರರಿಂದ ಪರಿಣಿತ ಅಭಿಪ್ರಾಯ ಪಡೆದು ಸೂಕ್ತ ಬದಲಾವಣೆಗಳನ್ನು ಅಳವಡಿಸಿ ಕರಡು ಬೈಲಾಗಳಿಗೆ ಸರ್ಕಾರದ ಅನುಮೋದನೆ ಪಡೆದು 15 ದಿನಗಳೊಳಗಾಗಿ ಸಹಕಾರ ಸಂಘಗಳ ಇಲಾಖೆಯ ನಿಗಧಿತ ಪ್ರಾಧಿಕಾರದಲ್ಲಿ ನೊಂದಣಿ ಮಾಡಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 3**

**ಸಂಸ್ಥೆಯ ಆಸ್ಪತ್ರೆಯ ಆವರಣದಲ್ಲಿ ಜನರಿಕ್ ಡ್ರಗ್ಸ್ ಮಾರಾಟ ಮಳಿಗೆಯನ್ನು ಸ್ಥಾಪಿಸುವ ಬಗ್ಗೆ:**

**ನಿರ್ಣಯ:** ಸದರಿ ಕಟ್ಟಡ ಹಾಗೂ ಖಾಲಿ ಜಾಗದ ಒಟ್ಟು 22 X 22 ಅಡಿ ವಿಸ್ತೀರ್ಣದ ಜಾಗವನ್ನು ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿದ ಬಾಡಿಗೆ ದರದನ್ವಯ ಸಹಕಾರಿ ಗ್ರಾಹಕರ ಮಹಾಮಂಡಳ ರವರಿಗೆ ನೀಡಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 4**

**ಮಿಮ್ಸ್ ಸಂಸ್ಥೆಯಲ್ಲಿ ಕಳೆದ 6 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಕ್ರೂಢೀಕೃತ ವೇತನ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವ ಬಗ್ಗೆ.**

**ನಿರ್ಣಯ:** ಆರನೇ ವೇತನ ಆಯೋಗದ ಶಿಪಾರಸ್ಸಿನನ್ವಯ ಜಾರಿಯಾಗಿರುವ ವೇತನದನ್ವಯ ಎಲ್ಲಾ ಕ್ರೂಢೀಕೃತ ವೇತನ ಸಿಬ್ಬಂದಿಯವರಿಗೆ ಅನ್ವಯವಾಗುವ ಕನಿಷ್ಠ ಮೂಲವೇತನದ ಶೇಕಡ 75 ರ ವೇತನವನ್ನು (ಪಿ.ಎಫ್. ಮೊತ್ತವೂ ಒಳಗೊಂಡಿರುತ್ತದೆ) ದಿನಾಂಕ: 01.05.2012 ರಿಂದ ಜಾರಿಗೆ ಬರುವಂತೆ ನೀಡಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 5**

**ಡಾ॥ ಸುಮಂಗಲ.ಬಿ. ರವರಿಗೆ 01.10.2009 ರಿಂದ 28.10.2010 ರವರೆಗೆ NPA ಪಾವತಿಸುವ ಕುರಿತು ಹಾಗೂ ದಿನಾಂಕ: 01.03.2010 ಹಾಗೂ 15.03.2010 ರವರೆಗಿನ ಗಳಿಕೆ ರಜೆಯನ್ನು ಮಂಜೂರು ಮಾಡುವ ಕುರಿತು.**

**ನಿರ್ಣಯ:** ಡಾ॥ ಸುಮಂಗಲ.ಬಿ. ರವರಿಗೆ ದಿನಾಂಕ: 01.10.2009 ರಿಂದ 28.02.2010 ರ ಅವಧಿಯ ವರೆಗೆ ಪ್ರತಿ ತಿಂಗಳಿಗೆ ರೂ.17,000/- ರಂತೆ ಒಟ್ಟು ರೂ.85,000/- ಗಳ NPA ಯನ್ನು ಸಂದಾಯ ಮಾಡಲು ಅನುಮೋದನೆ ನೀಡಲಾಯಿತು.

ಹಾಗೂ ಸದರಿಯವರಿಗೆ ದಿನಾಂಕ: 01.03.2010 ರಿಂದ 15.03.2010 ರವರೆಗಿನ ಅವದಿಗೆ ನಿಯಮಾನುಸಾರ ಗಳಿಕೆ ರಜವನ್ನು ಮಂಜೂರು ಮಾಡಲು ಸಂಸ್ಥೆಯ ನಿರ್ದೇಶಕರಿಗೆ ಸೂಚನೆಯನ್ನು ನೀಡಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 6**

**ಆಂತರಿಕ ವರ್ಗಾವಣೆ ಬಗ್ಗೆ.**

**ನಿರ್ಣಯ:** ಈ ವಿಷಯವನ್ನು ಕೈಬಿಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 7

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

**ವಿಷಯ (1) ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ:: ಎನ್. ರಾಮಲಿಂಗೇಗೌಡ ಹಾಗೂ ಶಸ್ತ್ರಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ:: ಸಿ.ಎಂ. ಪರಮೇಶ್ವರ ರವರು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುವ ಬಗ್ಗೆ.**

ನಿರ್ಣಯ(ಎ): ಸಂಸ್ಥೆಯಲ್ಲಿ ವೈದ್ಯಕೀಯ ಅಧೀಕ್ಷಕರಾಗಿ ಡಾ:: ಎನ್ ರಾಮಲಿಂಗೇಗೌಡ ರವರು ಕರ್ತವ್ಯ ನಿರ್ವಹಿಸುತ್ತಿದ್ದು ಇವರ ಹುದ್ದೆಯ ಮೇಲೆ ಹಾಗೂ ಅವರ ಕರ್ತವ್ಯದ ಬಗ್ಗೆ ಹಲವಾರು ದೂರುಗಳು ಬಂದಿರುತ್ತವೆ.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿದಾಗ ಗೈರುಹಾಜರಾಗಿದ್ದ ಡಾ:: ಎನ್ ರಾಮಲಿಂಗೇಗೌಡ, ವೈದ್ಯಕೀಯ ಅಧೀಕ್ಷಕರು ಇವರನ್ನು ಕಡ್ಡಾಯ ರಜೆಯ ಮೇಲೆ ತೆರಳಲು ಸೂಚಿಸಿರುತ್ತಾರೆ.ಈ ಹಿನ್ನೆಲೆಯಲ್ಲಿ ಡಾ:: ಕೆ.ಎಂ. ಶಿವಕುಮಾರ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವೈದ್ಯಶಾಸ್ತ್ರ ವಿಭಾಗ ರವರನ್ನು ತಾತ್ಕಾಲಿಕವಾಗಿ ವೈದ್ಯಕೀಯ ಅಧೀಕ್ಷಕರಾಗಿ ನೇಮಕ ಮಾಡಲಾಗಿರುತ್ತದೆ. ಡಾ:: ಎನ್.ರಾಮಲಿಂಗೇಗೌಡ ಇವರು ರಜೆ ಬಳಸಿಕೊಂಡು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ವೈದ್ಯಕೀಯ ಅಧೀಕ್ಷಕರಾಗಿ ಹುದ್ದೆಯಲ್ಲಿ ಮುಂದುವರೆದಿರುತ್ತಾರೆ.

ಡಾ:: ಎನ್. ರಾಮಲಿಂಗೇಗೌಡ, ವೈದ್ಯಕೀಯ ಅಧೀಕ್ಷಕರು ಇವರ ಮೇಲೆ ಹಲವಾರು ದೂರುಗಳಿದ್ದು, ಹಾಗೂ ಖರೀದಿಯಲ್ಲಿ ದಿ: 16.12.2005 ರಿಂದೀಚೆಗೆ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಕೈಗೊಳ್ಳಲು ತ್ರಿಸದಸ್ಯ ಸಮಿತಿಯನ್ನು ರಚಿಸಲು ಈಗಾಗಲೇ ನಿರ್ಣಯ ಕೈಗೊಳ್ಳಲಾಗಿದೆ.

ಆದುದರಿಂದ ಡಾ:: ಎನ್.ರಾಮಲಿಂಗೇಗೌಡ, ವೈದ್ಯಕೀಯ ಅಧೀಕ್ಷಕರವರನ್ನು ಸದರಿ ಹುದ್ದೆಯಲ್ಲಿ ಮುಂದುವರೆಸಿದಲ್ಲಿ ತನಿಖೆಯನ್ನು ಪಾರದರ್ಶಕವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ಅಡಚಣೆಯಾಗುವುದರಿಂದ ಸದರಿಯವರನ್ನು ಸಹಾಯಕ ಪ್ರಾಧ್ಯಾಪಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಇಲ್ಲಿಗೆ ನಿಯೋಜನೆಯ ಮೇಲೆ ತೆರಳಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 7

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

**ವಿಷಯ (1) ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ:: ಎನ್. ರಾಮಲಿಂಗೇಗೌಡ ಹಾಗೂ ಶಸ್ತ್ರಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ:: ಸಿ.ಎಂ. ಪರಮೇಶ್ವರ ರವರು ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುವ ಬಗ್ಗೆ.**

**ನಿರ್ಣಯ(ಎ):** ಸಂಸ್ಥೆಯಲ್ಲಿ ವೈದ್ಯಕೀಯ ಅಧೀಕ್ಷಕರಾಗಿ ಡಾ:: ಎನ್ ರಾಮಲಿಂಗೇಗೌಡ ರವರು ಕರ್ತವ್ಯ ನಿರ್ವಹಿಸುತ್ತಿದ್ದು ಇವರ ಹುದ್ದೆಯ ಮೇಲೆ ಹಾಗೂ ಅವರ ಕರ್ತವ್ಯದ ಬಗ್ಗೆ ಹಲವಾರು ದೂರುಗಳು ಬಂದಿರುತ್ತವೆ.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿದಾಗ ಗೈರುಹಾಜರಾಗಿದ್ದ ಡಾ:: ಎನ್ ರಾಮಲಿಂಗೇಗೌಡ, ವೈದ್ಯಕೀಯ ಅಧೀಕ್ಷಕರು ಇವರನ್ನು ಕಡ್ಡಾಯ ರಜೆಯ ಮೇಲೆ ತೆರಳಲು ಸೂಚಿಸಿರುತ್ತಾರೆ.ಈ ಹಿನ್ನೆಲೆಯಲ್ಲಿ ಡಾ:: ಕೆ.ಎಂ. ಶಿವಕುಮಾರ್, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವೈದ್ಯಶಾಸ್ತ್ರ ವಿಭಾಗ ರವರನ್ನು ತಾತ್ಕಾಲಿಕವಾಗಿ ವೈದ್ಯಕೀಯ ಅಧೀಕ್ಷಕರಾಗಿ ನೇಮಕ ಮಾಡಲಾಗಿರುತ್ತದೆ. ಡಾ:: ಎನ್.ರಾಮಲಿಂಗೇಗೌಡ ಇವರು ರಜೆ ಬಳಸಿಕೊಂಡು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ವೈದ್ಯಕೀಯ ಅಧೀಕ್ಷಕರಾಗಿ ಹುದ್ದೆಯಲ್ಲಿ ಮುಂದುವರೆದಿರುತ್ತಾರೆ.

ಡಾ:: ಎನ್. ರಾಮಲಿಂಗೇಗೌಡ, ವೈದ್ಯಕೀಯ ಅಧೀಕ್ಷಕರು ಇವರ ಮೇಲೆ ಹಲವಾರು ದೂರುಗಳಿದ್ದು, ಹಾಗೂ ಖರೀದಿಯಲ್ಲಿ ದಿ: 16.12.2005 ರಿಂದೀಚೆಗೆ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಕೈಗೊಳ್ಳಲು ತ್ರಿಸದಸ್ಯ ಸಮಿತಿಯನ್ನು ರಚಿಸಲು ಈಗಾಗಲೇ ನಿರ್ಣಯ ಕೈಗೊಳ್ಳಲಾಗಿದೆ.

ಆದುದರಿಂದ ಡಾ:: ಎನ್.ರಾಮಲಿಂಗೇಗೌಡ, ವೈದ್ಯಕೀಯ ಅಧೀಕ್ಷಕರವರನ್ನು ಸದರಿ ಹುದ್ದೆಯಲ್ಲಿ ಮುಂದುವರೆಸಿದಲ್ಲಿ ತನಿಖೆಯನ್ನು ಪಾರದರ್ಶಕವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ಅಡಚಣೆಯಾಗುವುದರಿಂದ ಸದರಿಯವರನ್ನು ಸಹಾಯಕ ಪ್ರಾಧ್ಯಾಪಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಇಲ್ಲಿಗೆ ನಿಯೋಜನೆಯ ಮೇಲೆ ತೆರಳಲು ತೀರ್ಮಾನಿಸಲಾಯಿತು.

**ನಿರ್ಣಯ(ಜ):** ಡಾ: ಸಿ.ಎಂ. ಪರಮೇಶ್ವರ, ಸಹಾಯಕ, ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ, ಮಿಮ್ಸ್, ಮಂಡ್ಯ ಇವರ ವಿರುದ್ಧ ಬಂದಿದ್ದ ಹಲವು ಗಂಭೀರ ಆರೋಪಗಳ ಮೇಲೆ ಸದರಿಯವರನ್ನು ಸರ್ಕಾರವು ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ದಿನಾಂಕ: 27.01.2010ರಂದು ಅಮಾನತ್ತಿನಲ್ಲಿರಿಸಿತ್ತು.

ಮಿಮ್ಸ್ ಬೈಲಾ-2005 ಹಾಗೂ ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿ-1957ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಮಿಮ್ಸ್ ಶಿಸ್ತುಪಾಲನಾ ಅಧಿಕಾರಿಯಾದ ವೈದ್ಯಕೀಯ ಶಿಕ್ಷಣ ಸಚಿವರು ದಿನಾಂಕ: 22.07.2010ರಂದು ಶ್ರೀ ಎಂ.ಎಸ್.ನಟರಾಜಮೂರ್ತಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಇಲಾಖಾ ವಿಚಾರಣಾಧಿಕಾರಿಗಳಾಗಿ ನೇಮಿಸಿ ಆದೇಶಿಸಿರುತ್ತಾರೆ.

ಸದರಿಯವರ ಮೇಲೆ ಎಂಟು ಗಂಭೀರವಾದ ಆರೋಪಗಳಿದ್ದು, ಇವುಗಳು ಅತ್ಯಂತ ಗುರುತರವಾಗಿವೆ. ಆದರೆ ವಿಚಾರಣಾಧಿಕಾರಿಗಳು ಸದರಿ ಯಾವುದೇ ಆರೋಪಗಳನ್ನು ಗಂಭೀರವಾಗಿ ಪರಿಗಣಿಸದೇ ಆರೋಪಿತರನ್ನು ಆರೋಪಮುಕ್ತರನ್ನಾಗಿಸಿದ್ದಾರೆ.

ವಿಚಾರಣಾಧಿಕಾರಿಯವರು ದಿನಾಂಕ: 03.06.2011ರಂದು ಸಲ್ಲಿಸಿದ ವಿಚಾರಣಾ ವರದಿಯನ್ನು ಕೂಲಂಕಷವಾಗಿ ಹಾಗೂ ಗಂಭೀರವಾಗಿ ಪರಿಶೀಲಿಸಿದ ಆಡಳಿತ ಮಂಡಳಿಯು, ವಿಚಾರಣಾಧಿಕಾರಿಯವರು ಆರೋಪಿಯು ಕರ್ತವ್ಯ ನಿರ್ವಹಿಸುತ್ತಿರುವ ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ:: ವಿ.ಎಲ್. ನಂದೀಶ್‌ರವರ ಹತ್ತಿರದ ಸಂಬಂಧಿಯಾಗಿದ್ದು, ಈ ಸಂಬಂಧದ ಪ್ರಭಾವವು ವಿಚಾರಣೆಯ ಮೇಲೆ ಆಗಿರುವುದು ಮೇಲ್ನೋಟಕ್ಕೆ ಆಡಳಿತ ಮಂಡಳಿಗೆ ಕಂಡು ಬಂದಿದ್ದು, ಆದ್ದರಿಂದಲೇ ವಿಚಾರಣಾಧಿಕಾರಿಯವರು ಎಲ್ಲಾ ಆರೋಪಗಳನ್ನು ತಳ್ಳಿಹಾಕಿರುವುದು ಸಾಧ್ಯವಿದೆಯೆಂದು ಭಾವಿಸಲಾಗಿದೆ. ಉದಾಹರಣೆಗೆ: ತನಿಖಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿರುವುದಿಲ್ಲ.

1. ಆರೋಪಿತರಾದ ಡಾ: ಸಿ.ಎಂ. ಪರಮೇಶ್ವರ ರವರು ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅವಧಿಯಲ್ಲಿಯೇ ಸಹಾಯಕ ಪ್ರಾಧ್ಯಾಪಕರಾಗಿ Mar Basellious Dental college, Kothamangalam, Kerala ಇಲ್ಲಿ ದಿನಾಂಕ: 04.02.2006 ನಂತರ ಕೆಲಸ

ನಿರ್ವಹಿಸುತ್ತಿರುವುದಾಗಿ ಆರೋಪ ಮಾಡಲಾಗಿದೆ. ಈ ಆರೋಪವು ಗಂಭೀರವಾಗಿದ್ದು, ಇದನ್ನು ಸರಿಯಾಗಿ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸದಿರುವುದು ಕಂಡು ಬರುತ್ತದೆ.

2. ಆರೋಪಿಯು ಒಂದು ಸರ್ಕಾರದ ಗೌರವಾನ್ವಿತ ಸಂಸ್ಥೆಯ ಜವಾಬ್ದಾರಿಯುತ ಸ್ಥಾನದಲ್ಲಿದ್ದು, ತನ್ನ ಪ್ರಮುಖ ಜವಾಬ್ದಾರಿಯನ್ನು ಗಮನಿಸದೆ, ಪರಿವೆಗೆ ತೆಗೆದುಕೊಳ್ಳದೆ ಖಾಸಗಿ ಸಂಘಟನೆಗಳಾದ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್), ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯೂಯು), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಕೆಐಡಿಡಬ್ಲ್ಯೂಯುಎ) ಇತ್ಯಾದಿ ಸಂಘಟನೆಗಳೊಂದಿಗೆ ಸಕ್ರಿಯವಾಗಿ ಗುರುತಿಸಿಕೊಂಡಿದ್ದು, ಆ ಸಂಘಟನೆಗಳವರು ಪದೇಪದೇ ಸಂಸ್ಥೆಯ ಆವರಣಕ್ಕೆ ಬಂದು ಗಲಾಟೆ ನಡೆಸಿ ಮೆರವಣಿಗೆ ಮಾಡಿ ಸಂಸ್ಥೆಯ ಆಡಳಿತಕ್ಕೆ ಶಾಂತಿಭಂಗ ಉಂಟು ಮಾಡುತ್ತಿರುತ್ತಾರೆ. ಈ ಅಂಶವು ಸದರಿ ಸಂಸ್ಥೆಯ ಹಿತದೃಷ್ಟಿಯನ್ನು ಕಾಪಾಡುವಲ್ಲಿ ಅತ್ಯಂತ ಮಹತ್ತರವಾದ ದೋಷಾರೋಪವಾಗಿರುತ್ತದೆ.
3. ಆರೋಪಿತ ನೌಕರರು ಗೌರವಾನ್ವಿತ ಸಂಸ್ಥೆಯೊಂದರ ಜವಾಬ್ದಾರಿಯುತ ಸ್ಥಾನದಲ್ಲಿದ್ದು, Non-Practicing Allowances ಸರ್ಕಾರದಿಂದ ಪಡೆದೂ, ಮಂಡ್ಯ ನಗರದಲ್ಲಿ ಖಾಸಗಿ ನರ್ಸಿಂಗ್ ಹೋಂನಲ್ಲಿ ನಿಯಮಬಾಹಿರವಾಗಿ ಪ್ರಾಕ್ಟೀಸ್ ನಡೆಸುತ್ತಿರುವುದು ಕಾನೂನುಬಾಹಿರವಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಹಾಗೂ ಸಮಗ್ರವಾಗಿ ಪರಿಶೀಲಿಸಿದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಮಂಡಳಿಯು ಆರೋಪಿತ ಅಧಿಕಾರಿಯ ಮೇಲೆ ಈ ಹಿಂದೆ ಮಾಡಲಾದ ಎಂಟು ಗಂಭೀರವಾದ ಆರೋಪಗಳನ್ನು ತನಿಖಾಧಿಕಾರಿಯಾದ ಶ್ರೀ ಎಂ.ಎಸ್.ನಟರಾಜಮೂರ್ತಿಯವರು ಗಂಭೀರವಾಗಿ ಪರಿಗಣಿಸದೇ ಅವರ ಮೇಲಿನ ಆರೋಪಗಳನ್ನು ನಿರಾಧಾರವೆಂದು ತಿರಸ್ಕರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ವಿಚಾರಣಾ ವರದಿಯನ್ನು ಆಡಳಿತ ಮಂಡಳಿಯು

ಒಪ್ಪಿಕೊಂಡಿರುವುದಿಲ್ಲ ಹಾಗೂ ಡಾ: ಸಿ.ಎಂ. ಪರಮೇಶ್ವರ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಲು ಅನುವಾಗುವಂತೆ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಇಲ್ಲಿನ ಶಸ್ತ್ರಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಿಯೋಜನೆ ಮೇಲೆ ನೇಮಿಸಲು ತೀರ್ಮಾನಿಸಲಾಯಿತು.

ಆದ್ದರಿಂದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಮಂಡಳಿಯು ಈ ವಿಚಾರದ ಬಗ್ಗೆ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ಹಾಗೂ ಅತ್ಯಂತ ಸೂಕ್ಷ್ಮವಾಗಿ ಪರಿಗಣಿಸಿ ತನಿಖೆ ನಡೆಸಲು ಅನುವಾಗುವಂತೆ ಹಾಗೂ ಈಗಾಗಲೇ ಸಂಸ್ಥೆಯಲ್ಲಿ ನಡೆಸಿರುವ ಖರೀದಿಯಲ್ಲಿನ ಅವ್ಯವಹಾರಗಳ ಬಗ್ಗೆ ಹಾಗೂ ಬೋಧಕ ಸಿಬ್ಬಂದಿಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸರ್ಕಾರದಿಂದ ರಚಿಸಲಾಗಿರುವ ತ್ರಿಸದಸ್ಯ ಸಮಿತಿಯಿಂದ ನಡೆಸಲು ಆಡಳಿತ ಮಂಡಳಿಯು ತೀರ್ಮಾನಿಸಿತು.

(ಎಸ್.ಎ. ರಾಮದಾಸ್)
ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ
ಅಧ್ಯಕ್ಷರು, ಮಿಮ್ಸ್ ಆಡಳಿತ ಪರಿಷತ್
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ